ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಎಲ್ಲರೂ ಈಗ ಬರುತ್ತಾರೆ.

(ಅಡಚಣೆ)

ಶ್ರೀ ಡಿ.ಕೆ. ಶಿವಕುಮಾರ್: ಮಂತ್ರಿಯಾಗದೆ ಇಷ್ಟು ಅವಮಾನ ವಾಗಿದ್ದರೂ ಮಾತನಾಡುತ್ತಿದ್ದೀರಲ್ಲಾ. ಮಾನ್ಯ ಹೆಗಡೆಗೆ ಮತ್ತು ಆರಗ ಜ್ಞಾನೇಂದ್ರ ರವರಿಗೆ ಆಗಿರುವ ಅವಮಾನ ಪಾಪ, ನೀವಿಬ್ಬರೂ ...

(ಅಡಚಣೆ)

(ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರು ಸಭಾತ್ಯಾಗ ಮಾಡಿದರು)

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ: ಸರ್ಕಾರ ಬಂದು ಮೂರು ತಿಂಗಳಾಗಿದೆಯಷ್ಟೆ. ಇನ್ನೂ 9 ತಿಂಗಳು ಅವಕಾಶ ನಮಗೆ ಕೊಡಿ. ಎಲ್ಲಾ ಸರಿಹೋಗುತ್ತದೆ.

(ಅಡಚಣೆ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈಗ ಮಂತ್ರಿಗಳು ಬರುತ್ತಾರೆ. ದಯವಿಟ್ಟು ಉಳಿದ ಸದಸ್ಯರಿಗೆ ...

(ಅಡಚಣೆ)

ಶ್ರೀ ಎನ್. ಚಲುವರಾಯಸ್ವಾಮಿ: ಬರುತ್ತಿದ್ದೇವೆ. ಸ್ವಲ್ಪ ಸಮಾಧಾನದಿಂದ ಇರಿ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ಸದನ ಸೇರಿದೆ. ಅಧ್ಯಕ್ಷರು ಬಂದು ಕುಳಿತಿದ್ದಾರೆ. ಕನಿಷ್ಟ ಅವರಿಗಾದರೂ ಗೌರವ ಬೇಡವೇ? ಮುಂದುಗಡೆ ಸಾಲಿನಲ್ಲಿ ಕನಿಷ್ಟ ಯಾರಾದರೂ ಒಬ್ಬ ಮಂತ್ರಿಯಾದರೂ ಬೇಡವೇ? ಏನು ನೀವು (ಚೆಲುವರಾಯಸ್ವಾಮಿಯವರನ್ನು ಉದ್ದೇಶಿಸಿ), ಸಮಾಧಾನವಾಗಿರಿ ಎಂದು ಹೇಳಿದರೆ ನಿಮಗೆ ಇಷ್ಟ ಬಂದ ಹಾಗೆ ಸದನ ನಡೆಸುವುದಕ್ಕಾಗುವುದಿಲ್ಲ. ಅಧ್ಯಕ್ಷರು ಬಂದು ಕುಳಿತು ಹತ್ತು ನಿಮಿಷವಾಯಿತು. ಈಗ ತಾವು ಮಾಡುವ ತಪ್ಪಿಗೆ ಎಲ್ಲವನ್ನೂ ಅಧ್ಯಕ್ಷರ ತಲೆ ಮೇಲೆ ಹಾಕಿಕೊಳ್ಳಬೇಕೇ? ಕನಿಷ್ಟ ಒಬ್ಬರಾದರೂ ಮಂತ್ರಿಗಳು ಸದನದಲ್ಲಿ ಇರಬೇಡವೇ? ಮೊದಲ ಸಾಲಿನಲ್ಲಿ ಒಬ್ಬರೂ ಇಲ್ಲ. ಎರಡನೇ ಸಾಲಿನಲ್ಲಿ ಸಹ ಒಬ್ಬರೂ ಇಲ್ಲ.

ಶ್ರೀ ಎಸ್. ರಾಜೇಂದ್ರನ್: ಆ ಮಂತ್ರಿಯೊಬ್ಬರು ಏಕೆ ಮುಂದುಗಡೆ ಬಂದು ಕುಳಿತುಕೊಳ್ಳಬಾರದು? ತಾವು ಮುಂದೆ ಬಂದು ಕುಳಿತುಕೊಳ್ಳಬೇಕು. ನೀವು ಹಿಂದುಗಡೆ ಕುಳಿತಿದ್ದೀರಿ. ಮುಂದಕ್ಕೆ ಬನ್ನಿ. ಆಮೇಲೆ ಹಿಂದಕ್ಕೆ ಹೋಗಬಹುದು. ಬನ್ನಿ. You are a Minister in this Government.